ಕೋಲಾರ ಜಿಲ್ಲೆಯಲ್ಲಿ ಗ್ರಾಮಪಂಚಾಯತಿಗಳಿಗೆ ಒದಗಿಸಿರುವ ಅನುದಾನ

1079(1576)

ಶ್ರೀ. ಜಿ.ವಿ.ಶ್ರೀ ರಾಮರೆಡ್ಡಿ, (ಬಾಗೇಪಲ್ಲಿ.)

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಗ್ರಾಮ ಪಂಚಾಯತಿಗಳಿಗೆ ಒದಗಿಸಲಾದ ಅನುದಾನವೆಷ್ಟು ?

ಆ) ಇದನ್ನು ಎಷ್ಟು ಕಂತುಗಳಲ್ಲಿ ಬಿಡುಗಡೆ ಮಾಡಲಾಗುವುದು ?

ಇ) ಕೋಲಾರ ಜಿಲ್ಲೆಗೆ ಪ್ರಸಕ್ತ ಈ ಸಾಲಿನಲ್ಲಿ ಒದಗಿಸಲಾದ ಅನುದಾನ ಎಷ್ಟು ?

ಶ್ರೀ ಎಂ.ಪಿ.ಪ್ರಕಾಶ್ : (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಹಾಗೂ ವಾರ್ತಾ ಮತ್ತು ಪ್ರಸಾರ ಸಚಿವರು).

ಅ) ಗ್ರಾಮ ಪಂಚಾಯತಿಗಳಿಗೆ ಈ ಕೆಳಗಿನಂತೆ ಅನುದಾನ ಒದಗಿಸಲಾಗುತ್ತಿದೆ :

(ಅ) ವರ್ಷಕ್ಕೆ ರೂ.1.00 ಲಕ್ಷ ಪ್ರತಿ ಗ್ರಾಮ
ಪಂಚಾಯತಿಗೆ ತಲಾನುದಾನ ರೂ.5681.89(ಲಕ್ಷ)

(ಆ) ಜಿ.ಜಿ.ಎಸ್. ಯೋಜನೆ
ಅಡಿಯಲ್ಲಿ ರೂ. 9383.43 -"-

(ಇ) ಹತ್ತನೆ ಹಣಕಾಸು
ಆಯೋಗದ ಶಿಫಾರಸ್ಸಿನಂತೆ ರೂ.2992.50 -"-

ಆ) (ಅ) ಮತ್ತು (ಇ) ನಾಲ್ಕು ಕಂತುಗಳಲ್ಲಿ ಬಿಡುಗಡೆ ಮಾಡಲಾಗುವುದು. (ಆ) ಎರಡು ಕಂತುಗಳಲ್ಲಿ ಬಿಡುಗಡೆಮಾಡಲಾಗುವುದು.

ಇ) (ಅ) ರೂ.306.00(ಲಕ್ಷಗಳು)

(ಆ) ರೂ.701.68 (-"-)

(ಇ) ರೂ.154.58 (-"-)

ಭಟ್ಕಳ ಕ್ಷೇತ್ರದಲ್ಲಿ ಗ್ರಾಮಪಂಚಾಯತಿ ಗ್ರಂಥಾಲಯ.

1080(1630)

ಶ್ರೀ ಶಿವಾನಂದ ನಾಯಕ್ (ಭಟ್ಕಳ)

ಮಾನ್ಯ ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಭಟ್ಕಳ ಕ್ಷೇತ್ರದಲ್ಲಿ ಎಲ್ಲೆಲ್ಲಿ ಗ್ರಾಮ ಪಂಚಾಯತಿ ಗ್ರಂಥಾಲಯಗಳನ್ನು ಪ್ರಾರಂಭಿಸಲಾಗಿದೆ.

ಆ) 1999-2000ನೇ ಸಾಲಿನಲ್ಲಿ ಸರ್ಕಾರ ಭಟ್ಕಳ ಕ್ಷೇತ್ರದಲ್ಲಿ ಎಲ್ಲೆಲ್ಲಿ ಗ್ರಂಥಾಲಯ ಪ್ರಾರಂಭಿಸಲು ಉದ್ದೇಶಿಸಲಾಗಿದೆ.

ಶ್ರೀ ಆರ್. ಕೃಷ್ಣಪ್ಪ. (ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು)

ಅ) ಭಟ್ಕಳ ಕ್ಷೇತ್ರದಲ್ಲಿ ಈ ಕೆಳಗಿನ ಗ್ರಾಮಗಳಲ್ಲಿ ಗ್ರಾಮ ಪಂಚಾಯತಿ ಗ್ರಂಥಾಲಯಗಳನ್ನು ಪ್ರಾರಂಭಿಸಲಾಗಿದೆ

1)	ಮಂಡಳ್ಳಿ	ಭಟ್ಕಳ ತಾಲ್ಲೂಕು.
2)	ಕಾಯ್ಕಿಣಿ	"
3)	ಬೈಲೂರು	"
4)	ಬೇಂಗ್ರೆ	"
5)	ಮಾವಿನಕುರ್ವೆ	"
6)	ಚಿಕ್ಕನಕೋಡ	ಹೊನ್ನಾವರ ತಾಲ್ಲೂಕು
7)	ಹಿರೇಬೈಲು	"
8)	ಬಳಕೂರು	"
9)	ಮಾವಿನಕುರ್ವ	"
10)	ಹಡೀನಬಾಳ	"
11)	ಕೇಳಗಿನೂರ	"
12)	ಮಂಕಿ	"
13)	ಖರ್ವ	"
14)	ಜಲವಳ್ಳಿ (ಸೂಳಕೋಳ)	"
15)	ಮೇಲಿನ ಇಡಗುಂಜಿ	"

ಆ) ಸರ್ಕಾರಿ ಸದರಿ ವರ್ಷದಲ್ಲಿ ಮಂಜೂರು ಮಾಡಲಿರುವ ಒಟ್ಟು ಅವಶ್ಯಕತೆಗಳಿಗನುಸಾರವಾಗಿ ತಾಲ್ಲೂಕುವಾರು ಸಂಖ್ಯೆಗಳನ್ನು ನಿರ್ಧರಿಸಲಾಗುವುದು.

ಭಟ್ಕಳ ಕ್ಷೇತ್ರದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಆಸ್ಪತ್ರೆಗಳಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿ.

1081(1631)

ಶ್ರೀ ಶಿವಾನಂದ ನಾಯಕ್ (ಭಟ್ಕಳ)

ಮಾನ್ಯ ಆರೋಗ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಭಟ್ಕಳ ಕ್ಷೇತ್ರದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಆಸ್ಪತ್ರೆಗಳು ಯಾವುವು ?

ಆ) ಸದರಿ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಆಸ್ಪತ್ರೆಗಳು ಸ್ವಂತ ಕಟ್ಟಡ ಹೊಂದಿದೆಯೇ ? ಸ್ವಂತ ಕಟ್ಟಡಗಳು ಸುಸ್ಥಿತಿಯಲ್ಲಿವೆಯೇ ? ಮಳೆಗಾಲದಲ್ಲಿ ಸೋರುತ್ತಿರುವ ಕಟ್ಟಡಗಳ ರಿಪೇರಿಗಾಗಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ.

ಇ) ಈ ಭಟ್ಕಳ ಕ್ಷೇತ್ರದಲ್ಲಿ ಇರುವ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಆಸ್ಪತ್ರೆಗಳಲ್ಲಿ ಖಾಲಿ ಇರುವ ಹುದ್ದೆಗಳು ಯಾವುವು ?

ಈ) ಈ ಹುದ್ದೆಗಳನ್ನು ಎಂದು ಭರ್ತಿ ಮಾಡಲಾಗುವುದು ?

ಡಾ ॥ ಹೆಚ್.ಪಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಸಾರ್ವಜನಿಕ ಆಸ್ಪತ್ರೆ, ಭಟ್ಕಳ

ಪ್ರಾ.ಆ.ಕೇಂದ್ರ, ಶಿರಾಳಿ

ಪ್ರಾ.ಆ.ಕೇಂದ್ರ, ಮುರುಡೇಶ್ವರ

ಪ್ರಾ.ಆ.ಕೇಂದ್ರ, ಬೈಲೂರು

ಪ್ರಾ.ಆ.ಕೇಂದ್ರ, ಬಿಳಿಕೆ ಮತ್ತು

ಪ್ರಾ.ಆ. ಘಟಕ, ಕೂನಾರ